**SUBJECT CODE: 400**

# 2021

## Compulsory Kannada
ಕಡ್ಡಾಯ ಕನ್ನಡ ಪರೀಕ್ಷೆ

| Time : 2 Hours | Maximum Marks : 100 |
|---|---|
| **ಸಮಯ : 2 ಗಂಟೆಗಳು** | **ಗರಿಷ್ಠ ಅಂಕಗಳು : 100** |

### SPECIFIC INSTRUCTIONS
**ನಿರ್ದಿಷ್ಟ ಸೂಚನೆಗಳು**

*(i)* Candidates have to attempt all questions.
**ಅಭ್ಯರ್ಥಿಗಳು ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಬೇಕು**

*(ii)* Marks carried by each question are indicated at its end.
**ಪ್ರತಿ ಪ್ರಶ್ನೆಯ ಕೊನೆಯಲ್ಲಿ ಅದಕ್ಕೆ ನೀಡಲಾಗುವ ಅಂಕಗಳನ್ನು ನಮೂದಿಸಲಾಗಿದೆ.**

**1.** ಈ ಕೆಳಕಂಡ ವಾಕ್ಯಗಳಲ್ಲಿನ **ಕಾಗುಣಿತಾಕ್ಷರಗಳ** ತಪ್ಪುಗಳನ್ನು ತಿದ್ದಿ ಬರೆಯಿರಿ: [5 × 2 = 10 **ಅಂಕಗಳು**]

*(a)* ಮಕ್ಕಳಿಗೆ ಮನೆಎ ಮೂದಲ ಪಾಟಸಾಲೆ

*(b)* ಪಾಂಡಪುರ್ತರ ಪತ್ನಿ ದ್ರೌಪತಿ

*(c)* ಮೈಸೂರು ದಶರ ಪ್ರಸಿದ್ಧ ಅಬ್ಬ

*(d)* ಟಿಪ್ಪು ಸುಲ್ತಾನ್ ಬಿಟೀಸರ ವಿರುದ್ಧ ಹೊರಡಿದನು

*(e)* ಸಮುದ್ದರದ ಅಲಗಳು ದೊಡವಾಗಿರುತದೆ

**2. ಈ ಕೆಳಕಂಡ ಗಾದೆಗಳ ಅರ್ಥ ಸ್ವಾರಸ್ಯವನ್ನು ವಿವರಿಸಿ:** [2 × 5 = 10 **ಅಂಕಗಳು**]

*(a)* ಬಡವನ ಕೋಪ ದವಡೆಗೆ ಮೂಲ

*(b)* ಕೆಟ್ಟು ಪಟ್ಟಣ ಸೇರು

NammaKPSC Academy

**3. ಈ ಕೆಳಕಂಡ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.** [5 × 1 = 5 **ಅಂಕಗಳು**]

*(a)* ಗಂಡು

*(b)* ಬಿಳಿಯ

*(c)* ಸ್ಥಾವರ

*(d)* ಪ್ರೀತಿ

*(e)* ನಗು

**4.** ಈ ಕೆಳಕಂಡ **ವಿಷಯದ ಕುರಿತು 250–300** ಪದಗಳಿಗೆ ಮೀರದಂತೆ ಪ್ರಬಂಧವನ್ನು ರಚಿಸಿ. [1 × 15 = 15 **ಅಂಕಗಳು**]

**ಕೃಷಿ ಸಂಸ್ಕೃತಿ**

NammaKPSC Academy

**5. ಈ ಕೆಳಕಂಡ ಪದಗಳನ್ನು ಬಿಡಿಸಿ ಬರೆಯಿರಿ.** [5 × 2 = 10 **ಅಂಕಗಳು**]

*(a)* ನುಡಿಗಟ್ಟು

*(b)* ಜಲಾಂಜಲಿ

*(c)* ಪಗಲಿರುಳುಂ

*(d)* ಸೀತಾಪಹರಣಂ

*(e)* ಮೆಚ್ಚನೀವರ್

**6. ಸಂಕ್ಷಿಪ್ತ ಲೇಖನ / (Précis Writing)** [1 × 10 = 10 **ಅಂಕಗಳು**]

**ಸುಮಾರು 75 ಶಬ್ಧಗಳಿಗೆ ಮೀರದಂತೆ ಈ ಕೆಳಗಿನ ಗದ್ಯಭಾಗದ ಸಾರವನ್ನು ನಿಮ್ಮ ಸ್ವಂತ ಮಾತುಗಳಲ್ಲಿ ಬರೆಯಿರಿ.**

ಬಾಳ್ವೆ ಬಂದಿರುವುದೇ ನಮ್ಮ ಪ್ರಯೋಜನಕ್ಕೆ. ಅದರಿಂದ ಲಾಭವಿದೆಯೆಂದೇ ನಾವು ಇಲ್ಲಿದ್ದೇವೆ; ಬಾಳ್ವೆ ಬಂದಿರುವುದು ಅದರ ನಿರಾಕರಣೆಗಲ್ಲ, ವ್ಯಕ್ತಿ ಜೀವನದ ವಿಕಾಸ ಬದುಕುವುದರಿಂದಲೇ ಆಗಬೇಕಾಗುತ್ತದೆ. ಬದುಕಿನಲ್ಲಿ ಜೀವಿ ಎಷ್ಟೆಷ್ಟು ಹೆಚ್ಚಾಗಿ, ಸೂಕ್ಷ್ಮವಾಗಿ, ಬದುಕನ್ನು ಸವಿಯುವ ಶಕ್ತಿಗಳನ್ನು ಬೆಳೆಯಿಸಿಕೊಳ್ಳುತ್ತಾನೋ–ಅಷ್ಟಷ್ಟು ಹೆಚ್ಚಾಗಿ ತನ್ನ ಅನುಭವಗಳಿಂದ ಪರಿಣಾಮಗೊಳ್ಳುತ್ತಾನೆ. ಅವನು ತನ್ನ ಶಕ್ತಿಗಳನ್ನು ಬೆಳೆಯಿಸಿ ಎಷ್ಟೆಷ್ಟು ವಿಸ್ತಾರವಾದ ಬಾಳ್ವೆಗೆ ಎದೆಯೊಡ್ಡುತ್ತಾನೆಯೋ ಅಷ್ಟಷ್ಟು ಬಹುಮುಖವಾದ, ಪ್ರಯೋಜನಕಾರಿಯಾದ 'ಅನುಭವ'ಗಳನ್ನು ಅವನು ಪಡೆಯಬಹುದು. ವಸ್ತುಗಳ ರೂಪದಿಂದ, ಆಕಾರ–ಬಣ್ಣಗಳಿಂದ ದೊರೆಯುವ ಯಾವತ್ತು ಪ್ರೇರಣೆಗಳು–ಸೌಂದರ್ಯಾನುಭವಗಳೇ. ಗೀತ, ಗಾನ, ಆರ್ಭಟ, ಅಬ್ಬರ ಮೊದಲಾದ ಯಾವೆಲ್ಲ ಬಗೆಯ ಧ್ವನಿಗಳಿಂದ ಪ್ರೇರಿತವಾಗುವ ಭಾವನೆಗಳೂ ಶ್ರವಣದ ಅನುಭವಗಳು. ಅದರಂತೆ ರಸನೆಯ ಅನುಭವಗಳು, ಗಂಧದ ಅನುಭವಗಳು, ಸ್ಪರ್ಶದ ಅನುಭವಗಳೂ ಇವೆ.

ಮನುಷ್ಯನ ಅನುಭವಗಳು ಎರಡು ಬಗೆಯಿಂದ ಹೆಚ್ಚುತ್ತವೆ. ತಾನೇ ಬದುಕಿನ ಸಂಸರ್ಗದಿಂದ ದೊರಕಿಸಿಕೊಳ್ಳುವ ಅನುಭವಗಳು ಒಂದು ಬಗೆ. ಇನ್ನೊಂದು ಬಗೆ–ಪರಿಣಿತರ ಅನುಭವಗಳನ್ನು ಓದಿ, ಕೇಳಿ ತಿಳಿಯುವುದು. ಆದರೆ ಈ ಎರಡನೆಯ ವರ್ಗದ ಅನುಭವ ನಮಗೆ ಉಪಯುಕ್ತವಾಗಲು, ನಮ್ಮಲ್ಲಿ ಅರಗಲು, ಸ್ವಂತ ಅನುಭವಗಳ ಸಾಮ್ಯವಾದರೂ ಬೇಕು. ನಮ್ಮ ಅನುಭವಗಳಿಗೂ ನಾವು ಕೇಳಿ ತಿಳಿಯುವ ಅನುಭವಗಳಿಗೂ ಹೊಂದಿಕೆಯಿಲ್ಲವಾದರೆ, ಅವು ನಮಗೆ ಹೆಚ್ಚಿನದೇನನ್ನೂ ಕೊಡಲಾರವು. ಗ್ರಹಗಳಲ್ಲಿ ಜೀವಕೋಟಿಯಿದೆಯೆಂದರೂ, ಅದೇನೆಂದು ನಮಗೆ ತಿಳಿಯದಿರುವ ಮಾದರಿಯಲ್ಲಿ, ಈ ಅನುಭವಗಳಾಗುತ್ತವೆ. ಸ್ವಂತ ಅನುಭವ ಪುಷ್ಟನಾದವನು ಪರರ ಅನುಭವಗಳನ್ನು ತೂಗಿ, ತನಗಿಲ್ಲದ ಅನುಭವಗಳನ್ನು ತಿಳಿಯಲು ಪೂರ್ವಸಿದ್ಧತೆ ಪಡೆಯಬಹುದು. ಬದುಕಿನ ಬೇರೊಂದು ಅನುಭವದಿಂದ, ತನಗೆ ಬಂದ ಅನುಭವದ ತೂಕವನ್ನು ಇನ್ನೂ ಚೆನ್ನಾಗಿ ಮಾಡಿಕೊಳ್ಳಲು ಸಹಾಯವಾಗಬಹುದು.

ವ್ಯಕ್ತಿ ಪ್ರಪಂಚದೊಡನೆ ವಿಹರಿಸುವ ಬಗೆಯಲ್ಲಿ ಕೆಡುಕಿರಬಹುದು. ಅದರಿಂದ ಅವನಿಗೆ ಅನೇಕ ತೊಡಕು, ದು:ಖಗಳು ಬರಬಹುದು. ವ್ಯಕ್ತಿಯ ಯಾವ ಸಮಾಜದ ಅಂಗವೋ ಅದು ವ್ಯವಹರಿಸುವ ರೀತಿಯ ತಪ್ಪಾಗಿ ಸಾಗಿದರೂ ಇದೇ ಪರಿಣಾಮವಾಗಬಹುದು. ಈ ದೊಡ್ಡ ವಿಶ್ವದ ವ್ಯಾಪಾರ ನಮ್ಮ ತಿಳಿವಿಗೆ ಸಿಗದಿರಬಹುದು. ಇಂಥೆಲ್ಲ ಕಾರಣಗಳಿಂದ ಬದುಕು ನಮಗೆ ಅರ್ಥವಾಗದೆ ಹೋದರೆ, ಇಲ್ಲವೆ ಬದುಕಿನಲ್ಲಿ ಕ್ಲೇಶ ಉಂಟಾದರೆ, ಅದರಿಂದ ಬದುಕೇ ನಿರರ್ಥಕ, ಮಾಯೆ; ಅದರಲ್ಲಿ ಮನವಿರಿಸುವುದು ತಪ್ಪು–ಎಂದು ತೀರ್ಮಾನಿಸಬೇಕಿಲ್ಲ.

ನಾವು ಹುಟ್ಟಿದ್ದೇವೆ–ಎನ್ನುವ ಒಂದೇ ಕಾರಣದಿಂದ ನಮ್ಮ ಹುಟ್ಟು ನಮಗೆ ಪ್ರಯೋಜನಕಾರಿಯೆಂದು ತಿಳಿಯಬೇಕು. ನಾವು ಯಾವ ಜೀವನದ ಅಂಶವಾಗಿರುವೆವೋ ಅದಕ್ಕೂ ನಮ್ಮಿಂದ ಪ್ರಯೋಜನವಿದೆ. ಜೀವಿಗಳು ಇಲ್ಲಿ ಬೆಳೆಯಬೇಕು. ಆ ಬದುಕಿನಿಂದ ಏನೋ ಲಾಭಗಳಿಸಬೇಕು–ಎಂದು ತಿಳಿಯುವುದರಿಂದಲೇ ಹೆಚ್ಚಿನ ಹಿತವಿದೆ. ಇಲ್ಲಿಗೆ ನಾವು ಸಲ್ಲದ ಜೀವಿಯಾಗಿದ್ದರೆ, ಇಲ್ಲಿ ಹುಟ್ಟುತ್ತಿರಲಿಲ್ಲ; ಎಲ್ಲಿಗೂ ಸಲ್ಲದವರಾದರೆ ನಮಗೆ ಹುಟ್ಟು ಬರುತ್ತಿರಲಿಲ್ಲ. ಈ ವಿಶ್ವದ ವ್ಯಾಪಾರವು ನೀರ ಮೇಲಣ ಗುಳ್ಳೆಯಂತೆ ಕ್ಷಣಿಕವಾಗಿರಬಹುದು. ಮೂರು ನಿಮಿಷದ್ದಿರಬಹುದು–ಅದರಿಂದ ನಿಷ್ಪ್ರಯೋಜನವೆಂಬ ತೀರ್ಮಾನ ಮಾಡಬೇಕಿಲ್ಲ. ನೂರು ವರ್ಷದೊಳಗೆ ಸವೆಯುವ ಕಾಯ ನಮಗೆ ಇರುವುದಾದರೆ, ಅಷ್ಟರೊಳಗೆ ನಾವು ಸಾಧಿಸಬಹುದಾದ ಕೆಲಸದ ಸಲುವಾಗಿ ಇದೆ–ಎಂದು ಅರ್ಥವಾಯಿತು. ಅಂಥ ಹತ್ತು, ನೂರು ವರ್ಷ ತಾಳಿಕೆಯ ಜೀವಿಗಳು, ಮೂರು ದಿನ ಬದುಕಬಲ್ಲ ಕ್ರಿಮಿಗಳು, ತಮ್ಮ ದೀರ್ಘಕಾಲದ ಸಂತಾನ ಯಾತ್ರೆಯಿಂದ ಚಿರಂತನವಾದ, ನಮ್ಮ ಕಲ್ಪನೆಯ ಪಾಲಿಗಾದರೂ ಚಿರಂತ ಎನಿಸುವಷ್ಟು ದೀರ್ಘವಾದ ಏನನ್ನೋ ಕಟ್ಟುತ್ತಿವೆ. ಮಣ್ಣಿನ ಇಟ್ಟಿಗೆ ಒಂದೇ ಗೇಣಿನದಾದರೂ, ಸಾವಿರಾರು ಇಟ್ಟಿಗೆಗಳಿಂದ ಒಡಗೂಡಿದ ಸೌಧ ಕಟ್ಟಬಹುದು. ಸಣ್ಣದು ವ್ಯರ್ಥವಾಗಬೇಕಿಲ್ಲ.

Nammak PSC Academy

ಇಂದು ನಮಗೆ ವಿಜ್ಞಾನ ಈ ಭೂಮಿಯ ರಚನೆ, ಜೀವಕೋಟಿಯ ವಿಕಾಸಗಳ ವಿಷಯದಲ್ಲಿ ತುಂಬ ಅನುಭವ ಕೊಟ್ಟಿದೆ. ಇನ್ನೂ ಕೊಡಬಹುದು. ಇನ್ನೂ ವಿಸ್ತೃತವಾಗಬಹುದು. ಕೊಟ್ಟುದರ ಮೇಲಿಂದ–ಭೂಮಿಯ ಯಾತ್ರೆಯಲ್ಲಿ ಜೀವಿಗಳ ಸಂತಾನಯಾತ್ರೆಯು ಒಂದು ಅಂಗವಾಗಿದೆಯೆಂದೂ, ಯುಗಯುಗದ ಬದುಕಿನಿಂದ ಅವು ಇಂದಿನ ರೂಪ, ಸ್ಥಿತಿಗಳಿಗೆ ಪರಿಣಮಿಸಿವೆಯೆಂದೂ ಕಂಡುಬರುತ್ತದೆ. ವಿಶ್ವವಂತಿರಲಿ ಬರಿಯ ಭೂಮಿಯೊಂದರ ವಿಸ್ತಾರ, ಗಹನತೆ, ಮಾಟ–ಇವುಗಳೇ ಬಹು ಅಗಾಧವಾಗಿವೆ. ನಮ್ಮ ಎಟುಕಿಗೆ ಸಿಗಲಾರದಷ್ಟು ವಿಶೇಷವಾಗಿವೆ. ಅದನ್ನು ತಿಳಿದಲ್ಲಿ–ಈ ಜೀವ ಜಗತ್ತಿನ ಓಟವಾಗಲೀ, ಅದಕ್ಕೆ ಹಿನ್ನೆಲೆಯಾದ–ಜಡಜಗತ್ತಿನ ಆಟವಾಗಲೀ–ಒಂದು ದಿನಕ್ಕಾಗಿ ಇಲ್ಲ, ಒಂದು ಜೀವಕ್ಕಾಗಿ ಇಲ್ಲ. ಹಿಂದಿನ ಯಾವತ್ತು ಜೀವಿಗಳಿಂದ ತೊಡಗಿ, ಇಂದಿನ ಜೀವನದ ಮೂಲಕ ಹರಿದು, ಎಂದಿನದೋ ಬದುಕಿನ ಕಡೆಗೆ ಅದು ಸಾಗುತ್ತಿದೆ. ಅದರಲ್ಲಿ ನಾವು ತಿಳಿದು ಮುಗಿಸದಷ್ಟು ಚೆಲುವಿದೆ, ಸತ್ಯವಿದೆ, ಗಹನತೆಯಿದೆ. ಆ ವಿಸ್ತೃತ ಜೀವನದ ಪ್ರವಾಹದಲ್ಲಿ ನಾವು ಎಷ್ಟು ಚೆನ್ನಾಗಿ ಬೆರೆಯಬಹುದೋ ಅಷ್ಟು ಚೆನ್ನಾಗಿ ತಿಳಿದು ಬದುಕುವ, ಅದಕ್ಕಿಂತ ಹೆಚ್ಚಿನ ಕೆಲಸ ನಮಗಿದೆಯೆಂದು ಹೇಗೆ ಸಿದ್ಧಮಾಡಬಲ್ಲೆವು?

ಬದುಕು ಪೂರ್ಣ ಸಿಹಿಯೂ ಅಲ್ಲ; ಪೂರ್ಣ ಕಹಿಯೂ ಅಲ್ಲ. ಅವುಗಳ ವಿವಿಧ ಪ್ರಮಾಣದ ಪಾಕ. ಕಹಿಯನ್ನು ಸಹಿಸುವ ಶಕ್ತಿ ಗಳಿಸಿದಂತೆ ಜೀವನ ಮತ್ತಷ್ಟು ಬಲಗೊಳ್ಳುತ್ತದೆ. ಕಹಿಯ ಅನುಭವದಿಂದ ಸಿಹಿಗೆ ಮತ್ತಷ್ಟು ಕಳೆಯಿದೆ. ಮನುಷ್ಯ ಸಮಾಜವೊಂದನ್ನೇ ಎಣಿಸಹೋದರೆ ಕಹಿಯ ಪ್ರಮಾಣ ಅಲ್ಲಿ ತುಂಬಿರುವಂತೆ ಕಾಣುವುದೇನೋ ನಿಜ. ಅಲ್ಲಿ ಅತಿಯಾಗಿ ಸಿಹಿಯನ್ನುಂಡು, ಮತಿಯ ತೋಲವನ್ನು ಕೆಡಿಸಿಕೊಂಡವರೂ ಉಂಟು. ಕಹಿಯೇ ದಿನದ ಉಸಿರಾಗಿ ಬಂದು 'ಬಾಳ್ವೆಗೆ ಏನೂ ಅರ್ಥವಿಲ್ಲ'ಎಂದವರೂ ಉಂಟು. ಇತರ ಜೀವಿಗಳ ಸಂಸಾರದಲ್ಲಿ ಕಾಣದಷ್ಟು ಕಹಿ ಸಿಹಿಗಳ ವಿತರಣೆಯ ತಾರತಮ್ಯ ಮನುಷ್ಯ ಸಮಾಜದಲ್ಲಿದೆ. ಈ ಸಮಾಜವು ಎಷ್ಟೆಷ್ಟು ನಾಗರಿಕವೆನಿಸಿಕೊಂಡಿದೆಯೋ, ಅಷ್ಟಷ್ಟು ಅಧಿಕ ಪ್ರಮಾಣದಲ್ಲಿ ಈ ಅವ್ಯವಸ್ಥೆ ಕಾಣುತ್ತಿದೆ. ಹೀಗೆ ನಮ್ಮ ಬದುಕು ಕೆಡಲು, ಹಿಂದಿನಿಂದ ಬಂದಿರುವ ನಮ್ಮ ಸಂಪ್ರದಾಯಗಳು ಎಷ್ಟು ಕಾರಣವೆಂದು ನಾವು ಯೋಚಿಸುವ, ಯಾವ ಭಾವನೆಗಳಿಂದಾಗಿ ಹೀಗೆ ವಿತರಣೆ ಕೆಟ್ಟಿದೆ, ಅನಿವಾರ್ಯ ದು:ಖಗಳು ಮನುಷ್ಯನ ಪಾಲಿಗೆ ಬಹುವಾಗಿ ಬಂದು ಕಾಡುತ್ತಿವೆ–ಎಂಬುದನ್ನು ನಾವು ಪರಿಶೀಲಿಸಿ, ಎದುರಿಸಬೇಕು. ಈ ಕೊರತೆಗೆ ಕಾರಣ–ಜೀವನ ಪ್ರವಾಹದೊಂದಿಗೆ ಸೇರಿಕೊಂಡಿರುವ ತನ್ನನ್ನು ಬೇರೆಯೇ ಸ್ವತಂತ್ರ ಆತ್ಮನೆಂದು ತಿಳಿದುದರಿಂದ–ಎಂದು ನನ್ನ ಊಹೆ.

NammaKPSC Academy

**7.** ಈ ಕೆಳಕಂಡ ನುಡಿಗಟ್ಟುಗಳಲ್ಲಿ ಐದರ ಅರ್ಥ ತಿಳಿಸಿ ಅವುಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಪ್ರಯೋಗಿಸಿ : [5 × 2 = 10 **ಅಂಕಗಳು**]

(*a*) ಕಣ್ಣು ಕೆಂಪಗೆ ಮಾಡು

(*b*) ಮುಖ ಊದಿಸು

(*c*) ಎಳ್ಳು ನೀರು ಬಿಡು

(*d*) ಚಳ್ಳೆ ಹಣ್ಣು ತಿನ್ನಿಸು

(*e*) ಹದ್ದಿನ ಕಣ್ಣು

**8.** **ಈ ಕೆಳಗಿನ ವಿಷಯದ ಕುರಿತು 100 ಪದಗಳಿಗೆ ಮೀರದಂತೆ ಪತ್ರಲೇಖನ ಬರೆಯಿರಿ.** [1 × 15 = 15 **ಅಂಕಗಳು**]

**ನಿಮ್ಮ ಊರಿನಲ್ಲಿ ನಡೆಯುವ ಜಾತ್ರೆಗೆ ವಿಶೇಷ ಸಾರಿಗೆ ಸೌಲಭ್ಯವನ್ನು ಕಲ್ಪಿಸುವಂತೆ ಕೋರಿ ಘಟಕ ವ್ಯವಸ್ಥಾಪಕರಿಗೆ ಪತ್ರ ಬರೆಯಿರಿ.**

**<u>ವಿಶೇಷ ಸೂಚನೆ:</u>**

**(ಗೆ, ವಿಳಾಸ– ಘಟಕ ವ್ಯವಸ್ಥಾಪಕರು, XXX ಜಿಲ್ಲೆ ಇವರಿಗೆ ಮತ್ತು ಇಂದ ವಿಳಾಸ – XXX ಸಂಖ್ಯೆ– XX, XXX ರಸ್ತೆ, XXX –ಸ್ಥಳ)– ಕಾಲ್ಪನಿಕವಾಗಿ ನೀಡಲಾಗಿರುವ ಈ ಮೇಲಿನ ವಿಳಾಸಗಳನ್ನಷ್ಟೇ ಬಳಸಿ ಪತ್ರ ಬರೆಯಲು ಸೂಚಿಸಿದೆ. ಇದರ ಹೊರತಾಗಿ ಬೇರೆ ಯಾವುದೇ ಹೆಸರನ್ನಾಗಲೀ, ವಿಳಾಸವನ್ನಾಗಲೀ, ಸಹಿಯನ್ನಾಗಲೀ ಪತ್ರ ಲೇಖನದಲ್ಲಿ ಬರೆಯಬಾರದು. ಈ ರೀತಿಯ ಯಾವುದೇ ನಮೂದು ಬರೆದಲ್ಲಿ ಪ್ರಶ್ನೆ ಸಹಿತ ಉತ್ತರ ಪುಸ್ತಿಕೆಯನ್ನು ಅಸಿಂಧುವೆಂದು ಪರಿಗಣಿಸಲಾಗುವುದು. ಮತ್ತು "ದುರಾಚಾರ ಪ್ರಕರಣ" ಎಂದು ಪರಿಗಣಿಸಿ ಅಭ್ಯರ್ಥಿತ್ವವನ್ನು ರದ್ದುಗೊಳಿಸುವುದಲ್ಲದೇ ಆಯೋಗವು ತೆಗೆದುಕೊಳ್ಳುವ ಶಿಸ್ತು ಕ್ರಮಕ್ಕೆ ಅಭ್ಯರ್ಥಿಯು ಒಳಗಾಗಬೇಕಾಗುತ್ತದೆ.**

NammaKPSC Academy

**9.** ಈ ಕೆಳಕಂಡ **ಗದ್ಯ ಭಾಗವನ್ನು** ಓದಿ ಕೊನೆಯಲ್ಲಿರುವ ಪ್ರಶ್ನೆಗಳಿಗೆ ಉತ್ತರಿಸಿ. [5 × 1 = 5 **ಅಂಕಗಳು**]

ಕನಕದಾಸರ 'ರಾಮಧಾನ್ಯ ಚರಿತ್ರೆ' ಚಮತ್ಕಾರಯುಕ್ತವಾದ ಒಂದು ಖಂಡಕಾವ್ಯ. ಇದರಲ್ಲಿ ರಾಗಿಯ ಹಿರಿಮೆಯನ್ನು ಎತ್ತಿ ಹಿಡಿಯುವ 165 ಪದ್ಯಗಳಿವೆ. ರಾವಣನ ಸಾವಿನ ನಂತರ ಶ್ರೀರಾಮನು ಋಷಿಗಳ ಆಶ್ರಮಕ್ಕೆ ಬರುತ್ತಾನೆ. ಋಷಿಗಳಿತ್ತ ಭಕ್ಷ್ಯ ಭೋಜ್ಯಗಳನ್ನು ಸವಿಯುತ್ತಾ, ಅವುಗಳನ್ನು ತಯಾರಿಸಲು ಬಳಸಿದ ಧಾನ್ಯಗಳನ್ನು ತರಿಸಿದನಂತೆ. ರಾಗಿ, ಭತ್ತ, ಜೋಳ, ಸಾಮೆ ಮೊದಲಾದ ನವಧಾನ್ಯಗಳಲ್ಲಿ ಯಾವುದು ಶ್ರೇಷ್ಠವೆಂದು ಚರ್ಚೆ ನಡೆಯಿತು. ಒಬ್ಬೊಬ್ಬ ಋಷಿಯು ಒಂದೊಂದು ಧಾನ್ಯವನ್ನು ಹೊಗಳಿದ. ಆಗ ನರೆದಲೆಗನಿಗೂ(ರಾಗಿ) ವ್ರೀಹಿಗೂ (ಅಕ್ಕಿ) ಸಾಕಷ್ಟು ವಾಗ್ವಾದ ನಡೆಯಿತು. ಕೊನೆಯಲ್ಲಿ ರಾಮನು ಅವೆರಡನ್ನೂ ಆರು ತಿಂಗಳ ಕಾಲ ಸೆರೆಯಲ್ಲಿಟ್ಟನು. ಆ ಮೇಲೆ ತರಿಸಿದಾಗ ನರೆದಲೆಗನಿಗೆ ಸಾರಸಹ್ಯಯನೆಂದೂ, ವ್ರೀಹಿ ನಿಸ್ಸಾರವೆಂದು ತೀರ್ಮಾನವಾಯಿತು. ಶ್ರೀರಾಮ ನರೆದಲೆಗನಿಗೆ 'ರಾಘವ' ಎಂದು ನೂತನ ಹೆಸರಿಟ್ಟು ಸನ್ಮಾನಿಸಿದನು. ಅದೇ ಇಂದು 'ರಾಗಿ' ಎಂದಾಗಿದೆ.

*(a)* 'ರಾಮಧಾನ್ಯ ಚರಿತ್ರೆ' ಯಾವುದರ ಹಿರಿಮೆ ಹೇಳುವ ಕಾವ್ಯವಾಗಿದೆ?

*(b)* ಋಷಿಗಳು ಭಕ್ಷ್ಯ ಭೋಜ್ಯಗಳನ್ನು ತಯಾರಿಸಲು ಎಷ್ಟು ಧಾನ್ಯಗಳನ್ನು ಬಳಸಿದ್ದಾರೆ?

*(c)* ಯಾವ ಧಾನ್ಯಗಳ ಮಧ್ಯೆ ವಾಗ್ವಾದ ನಡೆಯಿತು?

*(d)* ಶ್ರೀ ರಾಮನು ನರೆದಲೆಗ ಹಾಗೂ ವ್ರೀಹಿಗಳನ್ನು ಎಷ್ಟು ಕಾಲ ಸೆರೆಯಲ್ಲಿಟ್ಟನು?

*(e)* ರಾಮನು ನರೆದಲೆಗನಿಗೆ ಇಟ್ಟ ನೂತನ ಹೆಸರೇನು?

**10.** ಈ ಕೆಳಕಂಡ ಭಾಗವನ್ನು **ಕನ್ನಡಕ್ಕೆ** ಭಾಷಾಂತರಿಸಿ: [1 × 10 = 10 **ಅಂಕಗಳು**]

Rajesh arrives at Bengaluru City Railway Station at 6.00 a.m. He intends to go to Chinnaswamy Stadium. He doesn't like to take either bus or an autorikshaw. He decides to go on foot. He walks 10 meters towards south and takes a left turn near Shanthala Silk House. Then he walks down the roads towards east, passes Upparpet Police Station and again takes a very short left and continues his walk towards East on the pavement of Kempegowda road until he reaches a circle near St. Martha's Hospital. From here he walks towards his right and reaches Chinnaswamy Stadium.

* * *

NammaKPSC Academy

**SUBJECT CODE: 402**

# 2021

## Forestry - I

## ಅರಣ್ಯ - I

| Time : 3 Hours | Maximum Marks : 100 |
| --- | --- |
| ಸಮಯ : 3 ಗಂಟೆಗಳು | ಗರಿಷ್ಠ ಅಂಕಗಳು : 100 |

### SPECIFIC INSTRUCTIONS

ನಿರ್ದಿಷ್ಟ ಸೂಚನೆಗಳು

*(i)* Candidates have to attempt all questions.
**ಅಭ್ಯರ್ಥಿಗಳು ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಬೇಕು**

*(ii)* Marks carried by each question are indicated at its end.
**ಪ್ರತಿ ಪ್ರಶ್ನೆಯ ಕೊನೆಯಲ್ಲಿ ಅದಕ್ಕೆ ನೀಡಲಾಗುವ ಅಂಕಗಳನ್ನು ನಮೂದಿಸಲಾಗಿದೆ.**

NammaKPSC Academy

**1.** What is Protein Bank? (Not more than **100** words)
ಪ್ರೋಟೀನ್ ಬ್ಯಾಂಕ್ ಎಂದರೇನು? (**100** ಪದಗಳಿಗೆ ಮೀರದಂತೆ ಉತ್ತರಿಸಿ) [4]

**2.** Explain the food value of forest resources. (Not more than **100** words)
ಅರಣ್ಯ ಸಂಪನ್ಮೂಲಗಳ ಆಹಾರ ಮೌಲ್ಯ ವಿವರಿಸಿ. (**100 ಪದಗಳಿಗೆ ಮೀರದಂತೆ ಉತ್ತರಿಸಿ**) [4]

**3.** Differentiate between Silvics and Silviculture. What is the objective and scope of study of Silviculture? (Not more than **100** words)
ಸಿಲ್ವಿಕ್ಸ್ ಮತ್ತು ಸಿಲ್ವಿಕಲ್ಚರ್ ನಡುವಿನ ಅಂತರ ತಿಳಿಸಿ. ಸಿಲ್ವಿಕಲ್ಚರ್ ಅಧ್ಯಯನದ ಧ್ಯೇಯ ಮತ್ತು ವ್ಯಾಪ್ತಿಯನ್ನು ತಿಳಿಸಿ. (**100** ಪದಗಳಿಗೆ ಮೀರದಂತೆ ಉತ್ತರಿಸಿ) [4]

**4.** Write a note on impact of acid rain on forest vegetation. (Not more than **100** words)
ಅರಣ್ಯ ಸಸ್ಯರಾಶಿಯ ಮೇಲೆ ಆಮ್ಲ ಮಳೆಯ ಪ್ರಭಾವ ಕುರಿತು ಟಿಪ್ಪಣಿ ಬರೆಯಿರಿ. (**100 ಪದಗಳಿಗೆ ಮೀರದಂತೆ ಉತ್ತರಿಸಿ**) [4]

**5.** Write in detail, the environmental policy and legislation in India. (Not more than **250** words)
ಭಾರತದ ಪರಿಸರ ನೀತಿ ಹಾಗೂ ಶಾಸನ ಕುರಿತು ವಿಸ್ತಾರವಾಗಿ ಬರೆಯಿರಿ? (**250** ಪದಗಳಿಗೆ ಮೀರದಂತೆ ಉತ್ತರಿಸಿ) [12]

**6.** Explain value addition in Agroforestry system through apiculture, tussar culture and lac cultivation. (Not more than **250** words)
ಅರಣ್ಯ ಕೃಷಿ ಪರಿಸರದಲ್ಲಿ ಮೌಲ್ಯ ಸೇರ್ಪಡೆ ಮೂಲಕ ಜೇನು ಕೃಷಿ, ಟಸ್ಸಾರ ಕೃಷಿ ಮತ್ತು ಅರಗು ಬೇಸಾಯ ಕುರಿತು ವಿವರಿಸಿ. (**250** ಪದಗಳಿಗೆ ಮೀರದಂತೆ ಉತ್ತರಿಸಿ) [12]

7. How does spacing, thinning, fertilizer application and pruning affect the quality of wood? (Not more than **250** words)

ಮರದ ಗುಣಮಟ್ಟದ ಮೇಲೆ ಅಂತರ, ತೆಳುಗೊಳ್ಳುವಿಕೆ, ರಸಗೊಬ್ಬರ ಸೇರ್ಪಡೆ ಮತ್ತು ಮೊಟಕುಗೊಳಿಸುವಿಕೆಯು ಹೇಗೆ ಪರಿಣಾಮ ಬೀರುತ್ತದೆ? (**250** ಪದಗಳಿಗೆ ಮೀರದಂತೆ ಉತ್ತರಿಸಿ) [12]

8. Differentiate shelter wood systems from clear felling system. Explain in detail about shelter wood uniform system and its pattern of felling. (Not more than **250** words)

ಆಶ್ರಯ ಮರದ ವ್ಯವಸ್ಥೆಯನ್ನು ಸ್ಪಷ್ಟ ಬೀಳುವ ವ್ಯವಸ್ಥೆಯಿಂದ ಬೇರ್ಪಡಿಸಿ. ಆಶ್ರಯ ಮರದ ಏಕರೂಪ ವ್ಯವಸ್ಥೆ ಹಾಗೂ ಅದರ ಬೀಳುವ ಮಾದರಿಯನ್ನು ವಿವರವಾಗಿ ವಿವರಿಸಿ.(**250** ಪದಗಳಿಗೆ ಮೀರದಂತೆ ಉತ್ತರಿಸಿ) [12]

9. Elaborate the participation of public in forestry programmes. (Not more than **250** words)

ಅರಣ್ಯ ಕಾರ್ಯಕ್ರಮಗಳಲ್ಲಿ ಸಾರ್ವಜನಿಕ ಭಾಗವಹಿಸುವಿಕೆಯನ್ನು ವಿಶದೀಕರಿಸಿ. (**250** ಪದಗಳಿಗೆ ಮೀರದಂತೆ ಉತ್ತರಿಸಿ) [12]

10. Explain about Environmental Impact Assessment (EIA). Discuss in detail, its importance in relation to the developmental projects of the country and write the procedure for EIA in environmental management. (Not more than **250** words)

ಪರಿಸರ ಪರಿಣಾಮದ ಅಂದಾಜು ಮಾಡುವಿಕೆ(EIA)ಯನ್ನು ವಿವರಿಸಿ? ದೇಶದ ಅಭಿವೃದ್ಧಿ ಯೋಜನೆಗಳಿಗೆ ಸಂಬಂಧಿಸಿದಂತೆ ಅದರ ಪ್ರಾಮುಖ್ಯತೆಯನ್ನು ವಿಷದವಾಗಿ ಚರ್ಚಿಸಿ ಮತ್ತು ಪರಿಸರ ನಿರ್ವಹಣೆಯಲ್ಲಿ EIA ಕಾರ್ಯವಿಧಾನವನ್ನು ಬರೆಯಿರಿ. (**250** ಪದಗಳಿಗೆ ಮೀರದಂತೆ ಉತ್ತರಿಸಿ) [12]

11. After the establishment of plantations, how do you manage the forest plantations? Give a detailed account of operations and activities carried out in managing the established forest plantations.(Not more than **250** words)

ನೆಡುತೋಪು ಸ್ಥಾಪನೆಯಾದ ನಂತರ, ಅರಣ್ಯ ನೆಡುತೋಪುಗಳನ್ನು ಹೇಗೆ ನಿರ್ವಹಿಸುತ್ತೀರಿ? ಸ್ಥಾಪಿತ ಅರಣ್ಯ ನೆಡುತೋಪು ಕಾರ್ಯಾಚರಣೆ ಮತ್ತು ಕಾರ್ಯಚಟುವಟಿಕೆಗಳ ನಿರ್ವಹಣೆಯ ವಿಸ್ತಾರವಾದ ವಿವರಣೆ ನೀಡಿ. (**250** ಪದಗಳಿಗೆ ಮೀರದಂತೆ ಉತ್ತರಿಸಿ) [12]

* * *

NammaKPSC Academy

**SUBJECT CODE: 406**

# 2021

# Forestry - II
# ಅರಣ್ಯ - II

| Time : 3 Hours | Maximum Marks : 100 |
|---|---|
| ಸಮಯ : 3 ಗಂಟೆಗಳು | ಗರಿಷ್ಠ ಅಂಕಗಳು : 100 |

## SPECIFIC INSTRUCTIONS
### ನಿರ್ದಿಷ್ಟ ಸೂಚನೆಗಳು

*(i)* Candidates have to attempt all questions.
ಅಭ್ಯರ್ಥಿಗಳು ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಬೇಕು

*(ii)* Marks carried by each question are indicated at its end.
ಪ್ರತಿ ಪ್ರಶ್ನೆಯ ಕೊನೆಯಲ್ಲಿ ಅದಕ್ಕೆ ನೀಡಲಾಗುವ ಅಂಕಗಳನ್ನು ನಮೂದಿಸಲಾಗಿದೆ.

NammaKPSC Academy

**1.** Mention the different kinds of biodiversity. What are the causes for the loss of biodiversity? (Not more than **100** words)
ವಿವಿಧ ರೀತಿಯ ಜೀವವೈವಿಧ್ಯತೆಯನ್ನು ಉಲ್ಲೇಖಿಸಿ, ಜೀವವೈವಿಧ್ಯತೆಯ ನಷ್ಟಕ್ಕೆ ಕಾರಣಗಳು ಯಾವುವು? (**100** ಪದಗಳಿಗೆ ಮೀರದಂತೆ ಉತ್ತರಿಸಿ) [4]

**2.** Define private bargain method. Write about its applicability and advantages. (Not more than **100** words)
ಖಾಸಗಿ ಚೌಕಾಸಿ ವಿಧಾನವನ್ನು ಅದರ ಅನ್ವಯಿಸುವಿಕೆ ಮತ್ತು ಅನುಕೂಲಗಳೊಂದಿಗೆ ವಿವರಿಸಿ. (**100** ಪದಗಳಿಗೆ ಮೀರದಂತೆ ಉತ್ತರಿಸಿ) [4]

**3.** Differentiate between gums and resins. (Not more than **100** words)
ಅಂಟು ಮತ್ತು ರಾಳಗಳ ನಡುವಿನ ವ್ಯತ್ಯಾಸ. (**100** ಪದಗಳಿಗೆ ಮೀರದಂತೆ ಉತ್ತರಿಸಿ) [4]

**4.** Write a note on classification of forest offences. (Not more than **100** words)
ಅರಣ್ಯ ಅಪರಾಧಗಳ ವರ್ಗೀಕರಣದ ಕುರಿತು ಟಿಪ್ಪಣಿ ಬರೆಯಿರಿ. (**100** ಪದಗಳಿಗೆ ಮೀರದಂತೆ ಉತ್ತರಿಸಿ) [4]

**5.** Explain the different types of fences. (Not more than **125** words)
ವಿವಿಧ ರೀತಿಯ ಬೇಲಿಗಳನ್ನು ವಿವರಿಸಿ. (**125** ಪದಗಳಿಗೆ ಮೀರದಂತೆ ಉತ್ತರಿಸಿ) [6]

**6.** Differenciate between Heartwood and Sapwood. (Not more than **125** words)
ಹಾರ್ಟ್ ವುಡ್ (ಚೇಗು) ಮತ್ತು ಸ್ಯಾಪ್‌ವುಡ್ (ರಸದಾರು) ನಡುವಿನ ವ್ಯತ್ಯಾಸ.(**125** ಪದಗಳಿಗೆಮೀರದಂತೆ ಉತ್ತರಿಸಿ) [6]

**7.** What are the factors considered in the systems of extraction and disposal?(Not more than **125** words)

ಸಾರತೆಗೆಯುವಿಕೆ ಮತ್ತು ವಿಲೇವಾರಿ ವ್ಯವಸ್ಥೆಗಳಲ್ಲಿ ಪರಿಗಣಿಸಲಾದ ಅಂಶಗಳು ಯಾವುವು? ತಿಳಿಸಿರಿ. (**125** ಪದಗಳಿಗೆ ಮೀರದಂತೆ ಉತ್ತರಿಸಿ) [6]

**8.** Briefly explain the applications of remote sensing in forestry. (Not more than **125** words)

ಅರಣ್ಯದಲ್ಲಿನ ರಿಮೋಟ್ ಸೆನ್ಸಿಂಗ್ ಅನ್ವಯಿಸುವಿಕೆಯ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿ. (**125** ಪದಗಳಿಗೆ ಮೀರದಂತೆ ಉತ್ತರಿಸಿ) [6]

**9.** Define physical properties of wood. If a wood specimen/sample is given to you, how can you identify the given specimen without analyzing the anatomical features/ microscopic features of the sample? Discuss in detail with examples. (Not more than **250** words)

ಮರದ ಭೌತಿಕ ಗುಣಲಕ್ಷಣಗಳನ್ನು ವಿವರಿಸಿ. ಒಂದು ಮರದ ಮಾದರಿ/ ನಮೂನೆಯನ್ನು ನಿಮಗೆ ನೀಡಿದರೆ, ಅದರ ಅಂಗರಚನೆ/ ಸೂಕ್ಷ್ಮದರ್ಶಕೀಯ ಲಕ್ಷಣಗಳನ್ನು ವಿಶ್ಲೇಷಿಸದೆ ಆ ಮಾದರಿಯನ್ನು ಹೇಗೆ ಗುರುತಿಸುವಿರಿ? ಉದಾಹರಣೆಗಳೊಂದಿಗೆ ಸವಿವರವಾಗಿ ಚರ್ಚಿಸಿ. (**250** ಪದಗಳಿಗೆ ಮೀರದಂತೆ ಉತ್ತರಿಸಿ) [12]

**10.** What is Forest depot? Enlist the different types of depots. When you are posted as an in-charge officer of a sale depot, what measures will you take to keep the timbers in good condition, and for easy supervision and protection of timbers? (Not more than **250** words)

ಅರಣ್ಯ ಡಿಪೋ ಎಂದರೇನು? ವಿವಿಧ ರೀತಿಯ ಡಿಪೋಗಳನ್ನು ಪಟ್ಟಿ ಮಾಡಿ. ಒಂದು ಮಾರಾಟದ ಡಿಪೋಗೆ ನಿಮ್ಮನ್ನು ಮೇಲ್ವಿಚಾರಕರಾಗಿ ನೇಮಿಸಿದಾಗ ಮರಗಳನ್ನು ಉತ್ತಮ ಸ್ಥಿತಿಯಲ್ಲಿಡಲು, ಸುಲಭ ಮೇಲ್ವಿಚಾರಣೆಗಾಗಿ ಮತ್ತು ಅದರ ರಕ್ಷಣೆಗಾಗಿ ನೀವು ಯಾವ ಕ್ರಮಗಳನ್ನು ತೆಗೆದುಕೊಳ್ಳುತ್ತೀರಿ. (**250** ಪದಗಳಿಗೆ ಮೀರದಂತೆ ಉತ್ತರಿಸಿ) [12]

**11.** Justify the concept of Joint Forest Planning and Management with merits and demerits of Joint Forest Management over traditional forest management? (Not more than **250** words)

ಜಂಟಿ ಅರಣ್ಯ ಯೋಜನೆ ಮತ್ತು ನಿರ್ವಹಣೆಯ ಪರಿಕಲ್ಪನೆಯ ಅನುಕೂಲ ಹಾಗೂ ಅನಾನುಕೂಲಗಳನ್ನು ಸಾಂಪ್ರದಾಯಿಕ ಅರಣ್ಯ ನಿರ್ವಹಣೆಯೊಂದಿಗೆ ಹೋಲಿಸಿ ಸಮರ್ಥಿಸಿ. (**250** ಪದಗಳಿಗೆ ಮೀರದಂತೆ ಉತ್ತರಿಸಿ) [12]

**12.** Discuss in detail the constitution of the Central Zoo Authority and explain the functions of the Chief Wild Life Warden under Wildlife Protection Act 1972. (Not more than **250** words)

ಕೇಂದ್ರ ಮೃಗಾಲಯ ಪ್ರಾಧಿಕಾರದ ರಚನೆ ಕುರಿತು ಚರ್ಚಿಸಿ ಮತ್ತು ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರ ಅಡಿಯಲ್ಲಿ ಮುಖ್ಯ ವೈಲ್ಡ್ ಲೈಫ್ ವಾರ್ಡನ್ ಕಾರ್ಯಗಳನ್ನು ವಿವರಿಸಿ. (**250** ಪದಗಳಿಗೆ ಮೀರದಂತೆ ಉತ್ತರಿಸಿ) [12]

**13.** Discuss "Trinity of norms of the Normal Forests by Osmaston". How to achieve the objective of sustained yield concept? How do you define the abnormality of forest? Explain. (Not more than **250** words)

"ಟ್ರಿನಿಟಿ ಆಫ್ ನಾರ್ಮ್ಸ್ ಆಫ್ ದ ನಾರ್ಮಲ್ ಫಾರೆಸ್ಟ್ ಬೈ ಆಸ್‌ಮಾಸ್ಟನ್" ಈ ಕುರಿತು ಚರ್ಚಿಸಿ. ಸುಸ್ಥಿರ ಇಳುವರಿ ಕಲ್ಪನೆಯ ಗುರಿಯನ್ನು ಸಾಧಿಸುವ ಬಗೆ ಹೇಗೆ? ಅರಣ್ಯಗಳ ಅಪಸಾಮ್ಯತೆಯನ್ನು ಹೇಗೆ ನಿರೂಪಿಸುವಿರಿ? (**250** ಪದಗಳಿಗೆ ಮೀರದಂತೆ ಉತ್ತರಿಸಿ) [12]

NammaKPSC Academy